“ನಿನ್ನ ಜೊತೆಗಿರೋದಿಕ್ಕೆ ದೊಡ್ಡಮ್ಮನನ್ನು ಬರಹೇಳು. ಅಥವಾ ಬೇಗ ಹಾಕಿಕೊಂಡು ನೀನೇ ಅವರಲ್ಲಿಗೆ ಹೋಗು. ಕೇವಲ ಎರಡು ದಿವಸ ಅಷ್ಟೆ!”

ಎರಡು ಹಗಲುಗಳು ಒಂದು ರಾತ್ರಿ, ತೀವ್ರವಾದ ನಿಶ್ಶಬ್ದಗಳು ಅವಳನ್ನು ಚಿಟ್ಟು ಹಿಡಿಸಿ ಬೇಸರದ ಗೂಡಿಗೆ ನೂಕಿದ್ದವು.

ಎರಡನೆ ಹಗಲಿನ ಕೊನೆಯಲ್ಲಿ ಗಂಡನ ಆಗಮನವನ್ನು ನಿರೀಕ್ಷಿಸುತ್ತಾ ಅವಳು ಮೇಲಂತಸ್ತಿನಲ್ಲಿ ನಿಂತಿದ್ದಳು. ಹೊಸ ಸುಣ್ಣದ ಪುಡಿ ಅವಳ ಕಾಲುಗಳನ್ನು ನೋಯಿಸಿತು.

ಶೂನ್ಯವಾದ ಆಕಾಶದ ಅಂಚಿನಲ್ಲಿ ನಿರ್ಗುಳ್ಳೆಗಳು ಒಡೆದವು. ಹಾಲು ಮಗುಚಿ ಚೆಲ್ಲಿದ ಒಂದು ಪಾತ್ರೆಯಂತೆ ಅರಿಸಿನ ಉಳಿದುಕೊಂಡಿತ್ತು. ದೂರದಲ್ಲಿ ನೀರುತುಂಬಿದ ಹುಲ್ಲುಗಾವಲಿನಿಂದ ಬಿಳಿಕೊಕ್ಕರೆಗಳು ಮೇಲಕ್ಕೆ ಹಾರಿದವು. ಅವು ದೂರದೂರಕ್ಕೆ ಹೋದವು. ಎತ್ತರದಲ್ಲಿರುವಾಗ ಅಗಲಿಕೆಯ ವೇದನೆಯನ್ನು ಅವಳು ಅನುಭವಿಸಿದಳು. ಕೆಳಗಿನ ಬಂಜರು ನೆಲದಲ್ಲಿ ನಡೆಯಲು ಇಚ್ಛಿಸಲಿಲ್ಲ.

ಯಾವುದೊ ಕಣಿವೆಯಿಂದ ಒಂಟಿಯಾಗಿಬಿಟ್ಟಿದ್ದ ಕಾಗೆಯೊಂದರ ಕಿರುಚುವಿಕೆ ಕೇಳಿಸಿತು.

ಅವಳಿಗರಿವಿಲ್ಲದಂತೆ ಅದಕ್ಕೆ ಕಿವಿಯಾನಿಸಿದಳು.

ಅದು ಹತ್ತಿರಕ್ಕೆ ಬರಲೇ ಇಲ್ಲ. ದೂರಕ್ಕೆ ಹೋಗಲೂ ಇಲ್ಲ. ಸಹಸ್ರಾರು ಕಾಗೆಗಳಿಗಿಂತಲೂ ತೀಕ್ಷ್ಣವೂ ಸ್ಪಷ್ಟವೂ ಆದ ಕಿರುಚುವಿಕೆ ಮತ್ತೊಮ್ಮೆ ಅವಳನ್ನು ಹುಡುಕಿಕೊಂಡು ಬಂದಿತ್ತು.

## ಪಿ. ವತ್ಸಲಾ

ಕೇರಳದ ಕೋಳಿಕೋಡಿನಲ್ಲಿ ಜನಿಸಿದ ಪಿ. ವತ್ಸಲಾ ಶಿಕ್ಷಕರ ತರಬೇತಿ ಸಂಸ್ಥೆ ಹಾಗೂ ಪ್ರೌಢಶಾಲೆಗಳಲ್ಲಿ ಅಧ್ಯಾಪಕಿಯಾಗಿದ್ದರು. ಕೇರಳ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾಗಿ ಕೆಲಸ ಮಾಡಿದ್ದಾರೆ. 18 ಕಾದಂಬರಿ, 30ಕ್ಕೂ ಹೆಚ್ಚು ಕಥಾಸಂಕಲನಗಳು, ಐದು ಮಕ್ಕಳ ಸಾಹಿತ್ಯ ಕೃತಿಗಳು ಸೇರಿದಂತೆ 50ಕ್ಕೂ ಹೆಚ್ಚು ಪುಸ್ತಕಗಳನ್ನು ಪ್ರಕಟಿಸಿದ್ದಾರೆ. ಅವರ ಮೊದಲ ಕಾದಂಬರಿ ‘ನೆಲ್ಲ್’(ಭತ್ತ)ವನ್ನು ರಾಮು ಕಾರಿಯತ್ ನಿರ್ದೇಶಿಸಿದ್ದಾರೆ. ಅವರ ಮತ್ತೊಂದು ಕಾದಂಬರಿ ‘ಖಿಲಾಫತ್’ ಸಿನಿಮಾ ಆಗಲಿದೆ. ಕೇರಳದ ಪ್ರಗತಿಪರ ಹೋರಾಟಗಳಲ್ಲಿ ಸಕ್ರಿಯವಾಗಿದ್ದಾರೆ.

## ಪ್ರಭಾಕರನ್ ಕೆ.

ಕೆಪಿಟಿಸಿಎಲ್‌ನಲ್ಲಿ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಆಗಿ ನಿವೃತ್ತರಾಗಿರುವ ಪ್ರಭಾಕರನ್ ಕೇರಳ ಮೂಲದ ಕನ್ನಡಿಗರು. ಇದೀಗ ಶಿವಮೊಗ್ಗದಲ್ಲಿ ನೆಲೆಸಿದ್ದಾರೆ. ಸಮುದಾಯ ಕರ್ನಾಟಕ ಸಾಂಸ್ಕೃತಿಕ ಸಂಘಟನೆಯಲ್ಲಿ ಸುಮಾರು 28 ವರ್ಷಗಳಿಂದಲೂ ಸಕ್ರಿಯರಾಗಿದ್ದಾರೆ. ಕನ್ನಡ ಸಾಹಿತ್ಯ ಮತ್ತು ಸಮಾಜಶಾಸ್ತ್ರದ ಸ್ನಾತಕೋತ್ತರ ಪದವೀಧರರು. ಮಲಯಾಳಂನಿಂದ ಕನ್ನಡಕ್ಕೆ ಹಲವು ಪುಸ್ತಕಗಳನ್ನು ಅನುವಾದಿಸಿದ್ದಾರೆ. ಕನ್ನಡ ಪುಸ್ತಕ ಪ್ರಾಧಿಕಾರ, ಕುವೆಂಪು ಭಾಷಾಭಾರತಿ ಪ್ರಾಧಿಕಾರ, ಹಂಪಿಯ ಕನ್ನಡ ವಿಶ್ವವಿದ್ಯಾಲಯಗಳಿಗಾಗಿ ಮಲಯಾಳಂ ಮತ್ತು ಇಂಗ್ಲಿಷ್ ಲೇಖನಗಳನ್ನು ಕನ್ನಡಕ್ಕೆ ಭಾಷಾಂತರಿಸಿದ್ದಾರೆ.